ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560 099.
URL.www.anekal-pa.in, web5.kar.nic.in/e-vinyasa

## ಪ್ರಾರಂಭಿಕ ಪ್ರಮಾಣ ಪತ್ರ

(ನಮೂನೆ -3)

ಸಂಖ್ಯೆ: ಆಯೋಪ್ರಾ/ಎಲ್ಎಓ/05/2019-20 ದಿನಾಂಕ: 15 JUL 2019

**ವಿಷಯ:** ಬೆಂಗಳೂರು ನಗರ ಜಿಲ್ಲೆ,ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.150ರಲ್ಲಿನ 0ಎಕರೆ 26ಗುಂಟೆ ಪ್ರದೇಶಕ್ಕೆ ವಸತಿ ಉದ್ದೇಶಕ್ಕೆ ಏಕ ನಿವೇಶನ ನಕ್ಷೆ ಅನುಮೋದನೆಯನ್ನು ನೀಡುವ ಬಗ್ಗೆ.

**ಉಲ್ಲೇಖ:** 1) ಶ್ರೀ ದಿಲೀಪ್ ಮಾಂಗಿಲಾಲ್ ಬಜಾಜ್ ಪರವಾಗಿ ನೊಂದಾಯಿತ ಜಿಪಿಎ ಮತ್ತು ನೊಂದಾಯಿತ ಜಂಟಿ ಅಭಿವೃದ್ಧಿದಾರರಾದ ಮೆ.ಅಬಿ ಡೆವಲಪರ್ಸ್ ಮ್ಯಾನೇಜಿಂಗ್ ಪಾರ್ಟನರ್ ಶ್ರೀ ನಾಗರಾಜರೆಡ್ಡಿ ರವರ ಅರ್ಜಿ ದಿನಾಂಕ:04.05.2019.
2) ದಿನಾಂಕ:03.06.2019ರಂದು ನಡೆದ ಪ್ರಾಧಿಕಾರದ 66ನೇ ಸಭೆಯ ವಿಷಯ ಸಂಖ್ಯೆ:37ರ ತೀರ್ಮಾನ.
3) ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ
ದಿನಾಂಕ:05.07.2019 ಡಿ.ಡಿ.ಸಂಖ್ಯೆ: 708415 ರೂ.54,600/-
ಹಾಗೂ ಕೆರೆಗಳಲ್ಲಿ ನೀರು ಸಂರಕ್ಷಣಾ ಶುಲ್ಕ ಡಿ.ಡಿ.ಸಂಖ್ಯೆ:708417 ರೂ.66,000/-
(ರಶೀದಿ ಸಂಖ್ಯೆ:1782656, 997928 ದಿನಾಂಕ:06.07.2019)

********

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಇಗ್ಗಲೂರು ಗ್ರಾಮದ ಸ.ನಂ.150ರಲ್ಲಿನ 0ಎಕರೆ 26ಗುಂಟೆ ಪ್ರದೇಶಕ್ಕೆ ಉಲ್ಲೇಖ(1)ರಂತೆ, **ವಸತಿ ಉದ್ದೇಶಕ್ಕೆ ಏಕ ನಿವೇಶನ ನಕ್ಷೆ** ಅನುಮೋದನೆ ಪ್ರಸ್ತಾವನೆಯನ್ನು ಉಲ್ಲೇಖ(2)ರ ಆನೇಕಲ್ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಅನುಮೋದಿಸಲು ನಿರ್ಣಯಿಸಲಾಗಿರುತ್ತದೆ.ಹಾಗೂ ಉಲ್ಲೇಖ(3)ರಂತೆ ಸಂಬಂಧಿತ ಶುಲ್ಕವನ್ನು ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ಪ್ರಕರಣ 17ರಡಿಯಲ್ಲಿ **ಶ್ರೀ ದಿಲೀಪ್ ಮಾಂಗಿಲಾಲ್ ಬಜಾಜ್ ಪರವಾಗಿ ನೊಂದಾಯಿತ ಜಿಪಿಎ ಮತ್ತು ನೊಂದಾಯಿತ ಜಂಟಿ ಅಭಿವೃದ್ಧಿದಾರರಾದ ಮೆ.ಅಬಿ ಡೆವಲಪರ್ಸ್ ಮ್ಯಾನೇಜಿಂಗ್ ಪಾರ್ಟನರ್ ಶ್ರೀ ನಾಗರಾಜರೆಡ್ಡಿ,** ಇವರಿಗೆ **ವಸತಿ ಉದ್ದೇಶಕ್ಕಾಗಿ ಒಂಟಿ ನಿವೇಶನ** ನಕ್ಷೆಗೆ ಈ ಕೆಳಗಿನ ನಿಬಂಧನೆಗಳೊಡನೆ ಅನುಮೋದನೆಯನ್ನು ನೀಡಲಾಗಿದೆ.

1) ಪ್ರಸ್ತಾವಿತ ನಿವೇಶನದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಪುರಸಭಾ ಕಾರ್ಯಾಲಯ ಚಂದಾಪುರದಲ್ಲಿ ಇ-ಖಾತಾ ದಾಖಲು ಮಾಡಿಕೊಂಡ ನಂತರ ಉದ್ದೇಶಿಸಿರುವ ಅಭಿವೃದ್ಧಿಗೆ ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಗ್ರಾಮ ಪಂಚಾಯಿತಿ ಕಾಯ್ದೆಯಡಿ ಕಡ್ಡಾಯವಾಗಿ ಪರವಾನಗಿ ಪಡೆಯತಕ್ಕದ್ದು ಹಾಗೂ ಅಭಿವೃದ್ಧಿ ಶುಲ್ಕವನ್ನು ಪಾವತಿಸತಕ್ಕದ್ದು.
2) ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
3) ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು, ಮತ್ತು ರಸ್ತೆಗಳ ಎರಡೂ ಕಡೆ ಹೊಸ ಸಸ್ಯಗಳನ್ನು ಬೆಳೆಸುವುದು.
4) ನಿವೇಶನದ ಆವರಣದೊಳಗೆ ಮಳೆನೀರಿನ ಕೊಯ್ಲಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
5) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.

ಪು.ತಿ.ನೋ.

6)ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿಗೆ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

7) ಸದರಿ ನಿವೇಶನದಲ್ಲಿ ಕಡ್ಡಾಯವಾಗಿ ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಗೆ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು.

8) ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಒಂಟಿ ನಿವೇಶನ ನಕ್ಷೆಗೆ ನೀಡಿರುವ ಮಂಜೂರಾತಿಯೂ ಯಾವ ಪೂರ್ವ ಸೂಚನೆಯೂ ಇಲ್ಲದೇ ತಂತಾನೆ ರದ್ದಾಗುತ್ತದೆ.

9) ಪ್ರಸ್ತಾವಿತ ನಿವೇಶನವು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಬ್ದಾರಿಯಾಗಿ -ರುವುದಿಲ್ಲ.

10) ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಏಕ ನಿವೇಶನದಲ್ಲಿ ಯಾವುದೇ ಉಪವಿಭಜನೆ ಮಾಡಬಾರದು.

11) ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದಲ್ಲ.

12) ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 17(4)ರಂತೆ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

13) ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ, ನ್ಯಾಯಾಲಯದ ಆದೇಶಕ್ಕೆ ಬದ್ಧರಾಗುವ, ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ/ದಾಖಲೆಗಳು, ತಪ್ಪಾಗಿದ್ದಲ್ಲಿ/ಪೋರ್ಜರಿ ಆಗಿದ್ದಲ್ಲಿ ಒಂಟಿ ನಿವೇಶನ ನಕ್ಷೆ ಅನುಮೋದನೆಯು ಸ್ವಯಂಚಾಲಿತವಾಗಿ ರದ್ದಾಗುವ ನಿಬಂಧನೆಗೊಳ್ಳಪಟ್ಟಿರುತ್ತದೆ.

14)ವಿಕಲಚೇತನರಿಗೆ ಅನುಕೂಲವಾಗುವಂತೆ ರಸ್ತೆಯನ್ನು ಅಭಿವೃದ್ಧಿಪಡಿಸತಕ್ಕದ್ದು.

15)ವಿನ್ಯಾಸ ಪ್ರದೇಶದಲ್ಲಿನ ಖರಾಬು/ಸರ್ಕಾರಿ ಜಮೀನುಗಳಿದ್ದಲ್ಲಿ ಅದನ್ನು ಒತ್ತುವರಿ ಮಾಡತಕ್ಕದಲ್ಲ.

16) ಇತರೆ ಸಾಮಾನ್ಯ ಷರತ್ತುಗಳು.

15/07

**ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು**

**ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು(ಪ್ರ),**

ಆನೇಕಲ್ ಯೋಜನಾ ಪ್ರಾಧಿಕಾರ,

ಆನೇಕಲ್.

**ಪ್ರತಿಯನ್ನು:**

1)ಶ್ರೀ ದಿಲೀಪ್ ಮಾಂಗಿಲಾಲ್ ಬಜಾಜ್ ಪರವಾಗಿ ನೊಂದಾಯಿತ ಜಿಪಿಎ ಮತ್ತು ನೊಂದಾಯಿತ ಜಂಟಿ ಅಭಿವೃದ್ಧಿದಾರರಾದ ಮೆ.ಅಬಿ ಡೆವಲಪರ್ಸ್ ಮ್ಯಾನೇಜಿಂಗ್ ಪಾರ್ಟ್‌ನರ್ ಶ್ರೀ ನಾಗರಾಜರೆಡ್ಡಿ, ನಂ.393, ಮೊದಲನೇ ಮಹಡಿ, 15ನೇ ಕ್ರಾಸ್, 5ನೇ ಮೈನ್, 6ನೇ ಸೆಕ್ಟರ್, ಹೆಚ್.ಎಸ್.ಆರ್.ಲೇಔಟ್, ಬೆಂಗಳೂರು-560 102 ಇವರಿಗೆ ಮಾಹಿತಿಗಾಗಿ

2)ಮುಖ್ಯಾಧಿಕಾರಿಗಳು, ಪುರಸಭೆ, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರಿಗೆ ನಕ್ಷೆಯೊಂದಿಗೆ ಕಳುಹಿಸಿದೆ. ಹಾಗೂ ಅರ್ಜಿದಾರರಿಂದ ನಿಯಮಗಳಂತೆ ಅಭಿವೃದ್ಧಿ ಶುಲ್ಕಗಳನ್ನು ಪಾವತಿಸಿಕೊಂಡು ಮುಂದಿನ ಕ್ರಮಕೈಗೊಳ್ಳಲು ಕೊರಲಾಗಿದೆ.

3)ಕಛೇರಿ ಪ್ರತಿ.